## 2

## ಮೂಲ ವಾಕ್ಯ: ಲೂಕ 22:14-20

# ಕರ್ತನ ಭೋಜನದ ಅರ್ಥ (2)

ಯೇಸು ಕ್ರಿಸ್ತನು ರಕ್ತಮಾಂಸದಾರಿಯಾಗಿ, ಭೂಲೋಕಕ್ಕೆ ಇಳಿದು ಬಂದು, 3½ ವರ್ಷಗಳ ಕಾಲ ವ್ಯಕ್ತಿಗತ ಸೇವೆಯನ್ನು ಮಾಡಿದನು. ಆತನು ವೇದನೆಪಟ್ಟು, ಶಿಲುಬೆಯಲ್ಲಿ ಯಜ್ಞಾರ್ಪಿತನಾಗಿ, ಸತ್ತು ಹೂಣಲ್ಪಟ್ಟು, ಮೂರನೆಯ ದಿನ ಎದ್ದು ಬಂದನು. ನಂತರ ಆತನು ಪರಲೋಕಕ್ಕೆ ಏರಿಹೋಗಿ, ಪರಲೋಕ, ಭೂಲೋಕಗಳನ್ನು ಆಳುತ್ತಿದ್ದಾನೆ (ಮತ್ತಾಯ 28:18; ಎಫೆಸ 1:20-23; 1 ಪೇತ್ರ 3:22). ಆತನ ಎರಡನೇ ಬರೋಣವು ನಂತರದ ಮಹಾ ಕಾರ್ಯವಾಗಿದೆ, ಅದು ಅಂತ್ಯದ ಸಮಯವಾಗಿದೆ (ಯೋಹಾನ 14:3; 1 ಕೊರಿಂಥ 15:22-27). ಕರ್ತನ ಭೋಜನದ ಮುಖಾಂತರ, ಕ್ರೈಸ್ತರಾದವರು ಆತನು ಬರುವವರೆಗೆ ಆತನ ಮರಣವನ್ನು ಪ್ರಚುರಪಡಿಸುತ್ತಿರುತ್ತಾರೆ.

ಕರ್ತನ ಭೋಜನದ ಕುರಿತ ಈ ಕೆಳಗಿನ ಆಲೋಚನೆಗಳು ಕ್ರೈಸ್ತರಿಗೆ ವಿಶೇಷವಾದ ಅರ್ಥವನ್ನು ನೀಡುತ್ತವೆ:

- ಯೇಸುವಿನ ಹಾಗೂ ಆತನ ಮರಣದ ನೆನಪು
- ಯೇಸುವಿನ ಎಂಬ ಹೆಸರಿನ ಅರ್ಥದ ಧ್ಯಾನ
- ಆತನೊಂದಿಗಿನ ಆತ್ಮೀಕ ಸಂಪರ್ಕ
- ಆತನಿಗಾಗಿ ದೇವರಿಗೆ ಕೃತಜ್ಞತೆ
- ದೇವರ ಮಗ ಹಾಗೂ ಮೆಸ್ಸೀಯನೆಂದು ಗೌರವಿಸುವದು
- ಆತನೇ ಪ್ರಭು ಹಾಗೂ ಕ್ರಿಸ್ತನೆಂದು ಸನ್ಮಾನಿಸುವದು
- ವಿಶೇಷ ಭಕ್ತಿಯ ವೃದ್ಧಿ
- ಕ್ರೈಸ್ತ ಸಹವಾಸದ ಅನ್ಯೋನ್ಯತೆ
- ಆತನ ದೇಹ ಮತ್ತು ರಕ್ತದಲ್ಲಿ ಆತ್ಮೀಕ ಸಂಬಂಧ
- ಹೊಸ ಒಡಂಬಡಿಕೆಯನ್ನು ಒಪ್ಪಿಕೊಳ್ಳುವ ಪ್ರಕಟನೆ
- ದೇವರ ವಾಕ್ಯಕ್ಕನುಗುಣವಾಗಿ ಜೀವಿಸುವಂಥ ಪ್ರತಿಷ್ಠೆ
- ಆತನು ಬರುವವರೆಗೆ ಆತನ ಜೀವ ಮರಣ ಪುನರುತ್ಥಾನದ ಪ್ರಕಟನೆ
- ಆತ್ಮೀಯ ಭಲ ಹಾಗೂ ಚೈತನ್ಯ ಹೊಂದುವದು

ಈ ದಿನಗಳಲ್ಲಿ ಕರ್ತನ ಭೋಜನದ ಮೂಲಕ, ಆತನ ಅನುಯಾಯಿಗಳು ಆತ್ಮೀಕ ಅನ್ಯೋನ್ಯತೆಯನ್ನು ಅನುಭವಿಸಬಹುದಾಗಿದೆ (1 ಕೊರಿಂಥ 11:26). ನಿಜವಾದ ಪದಾರ್ಥಗಳನ್ನು ಸೇವಿಸುವ ಮೂಲಕ, ಒಂದು ಕಾಲದಲ್ಲಿ ಆತನು ಇದ್ದನು ಎಂಬ ಅಂಶವನ್ನು ನೆನಪು ಮಾಡುತ್ತದೆ. ನಾವು ಆತನನ್ನು ನೋಡದೆ ಇದ್ದರೂ ಈ ಗುರುತುಗಳು ಆತನು ನಮ್ಮೊಂದಿಗಿರುವನು ಎಂದು ನೆನಪಿಸುತ್ತದೆ. ಹಾಗೂ ನಾವುಗಳು ಆತನ ಆತ್ಮೀಕ ಪ್ರಸನ್ನತೆಯನ್ನು ಆನಂದಿಸಬಹುದು. "ಯಾಕಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು" (ಮತ್ತಾಯ 18:20). ಆತನು ಯುಗದ ಸಮಾಪ್ತಿಯವರೆಗೆ ತನ್ನ ಅನುಯಾಯಿಗಳೊಂದಿಗೆ,

ಇರುವೆನೆಂದಿರುವನು (ಮತ್ತಾಯ 28:20).

ಈ ಸತ್ಯಾಂಶಗಳ ಹಿನ್ನೆಲೆಯಲ್ಲಿ, "ನೆನಪಿಸು" ಎಂಬುದು ನಮ್ಮನ್ನು ನಾವು ತೊಡಗಿಸಿ ಕೊಳ್ಳುವಂಥದ್ದು ಸಾಧಾರಣವಾಗಿರುವದಿಲ್ಲ.

## ಕ್ರಿಸ್ತನೊಂದಿಗಿನ ಅನ್ಯೋನ್ಯತೆಯನ್ನು ಹೊಂದುತ್ತೇವೆ

ಕರ್ತನ ಭೋಜನದಲ್ಲಿ ಯೇಸುವಿನೊಂದಿಗೆ ಅನ್ಯೋನ್ಯತೆ ಸಹವಾಸವನ್ನು ಹೊಂದಿರುತ್ತೇವೆ (1 ಕೊರಿಂಥ 10:16). ನಮ್ಮ ಅನ್ಯೋನ್ಯತೆಯಿಲ್ಲದೆ ಯೇಸು ಒಂಟಿಗನಾಗಿರದೆ; ಪ್ರೀತಿಯ ನಿಮಿತ್ತವಾಗಿ, ತನ್ನ ಸೃಷ್ಟಿಯೊಂದಿಗೆ ಅನ್ಯೋನ್ಯತೆಯನ್ನು ಬಯಸುತ್ತಾನೆ ಹನೋಕನು ದೇವರೊಂದಿಗೆ ನಡೆದಿದ್ದರಿಂದ, ದೇವರು ಅವನನ್ನು ತನ್ನ ಬಳಿಗೆ ತೆಗೆದುಕೊಂಡ ನಿದರ್ಶನವಿದೆ (ಆದಿಕಾಂಡ 5:24; ಇಬ್ರಿಯ 11:5), ಹಾಗೂ ನಂಬಿಗಸ್ತನಾದ ಎಲಿಯನನ್ನು ಸಹ ತನ್ನ ಬಳಿಗೆ ಕರಕೊಂಡನು (2 ಅರಸು 2:11). ಯಾಕೋಬನು ಬರೆದು, "ಪವಿತ್ರಾತ್ಮನು ಅಭಿಮಾನತಾಪದಿಂದ ನಮಗೋಸ್ಕರ ಹಂಬಲಿಸುತ್ತಾನೆ" (ಯಾಕೋಬ 4:5; NRSV). ಯೇಸು ನಮ್ಮ ಅನ್ಯೋನ್ಯತೆಯನ್ನು ಬಯಸುತ್ತಾನೆ (ಪ್ರಕಟನೆ 3:20), ಆದರೆ ಆತನ ಅನ್ಯೋನ್ಯತೆ ಮನುಷ್ಯರಿಗೆ ಬಹಳ ಅಗತ್ಯವಿದೆ. ಕರ್ತನ ಭೋಜನದ ಮೂಲಕ ಆ ಸಂಬಂಧವನ್ನು ನಾವುಗಳು ಪಡೆಯಲು ಸಾಧ್ಯವಿದೆ.

ನನ್ನ ತಾತ ತಾನು ಸಾಯುವ ಮೊದಲು ತನ್ನಲ್ಲಿದ್ದ ಕಿಸೆಯಲ್ಲಿಡಬಹುದಾದ ಚೂರಿಯನ್ನು ನನಗೆ ನೀಡಿದ್ದನು, ಅದು ಆತನ ಬಳಿಯಲ್ಲಿ ಬಹಳ ದಿನಗಳಿಂದ ಇತ್ತು. ಪ್ರತಿಸಾರಿ ಆ ಚೂರಿಯನ್ನು ನಾನು ನೋಡುವಾಗ, ನನ್ನ ತಾತನ ನೆನಪು ಉಂಟಾಗುತ್ತಿತ್ತು. ಅವರು ಸತ್ತು ಅನೇಕ ವರ್ಷಗಳಾಗಿದ್ದರೂ, ಅವರೊಂದಿಗಿದ್ದ ಕ್ಷಣಗಳ ನೆನಪು ಉಂಟಾಗುತ್ತಿತ್ತು. ಇದೇ ವಿಧದಲ್ಲಿ ಕರ್ತನ ಭೋಜನವು, ಆತನು ಒಂದು ಕಾಲದಲ್ಲಿ ಈ ಭೂ ಮಂಡಲದಲ್ಲಿ ವಾಸಿಸಿದ್ದನು. ನಮ್ಮನ್ನು ಪ್ರೀತಿಸಿ ನಮ್ಮ ಪಾಪಗಳಿಗಾಗಿ ಸತ್ತನು ಎಂಬುದನ್ನು ನೆನಪು ಮಾಡುತ್ತದೆ.

ಕರ್ತನ ಭೋಜನವು ದೈಹಿಕ ಗುರುತುಗಳಾಗಿರುವದರಿಂದಲೂ, ಅದು ಆತ್ಮೀಕವಾದ ಯೇಸುವಿನ ಪ್ರಸನ್ನತೆಯನ್ನು ನೀಡುವದರಿಂದ, ದೇವರೊಂದಿಗೆ ಸಂಪರ್ಕವನ್ನು ಉಂಟುಮಾಡುತ್ತದೆ (ಯೋಹಾನ 20:29). ಇದು ಬೆಳಕಿನಲ್ಲಿ ನಡೆಯುವ ಕ್ರಿಯೆಯಾಗಿದ್ದು ತಂದೆ ಮಗ ಹಾಗೂ ಕ್ರೈಸ್ತ ಸಹೋದರ ಹಾಗೂ ಸಹೋದರಿಯರೊಂದಿಗೆ ಅನ್ಯೋನ್ಯತೆ ಉಂಟುಮಾಡುತ್ತದೆ (1 ಕೊರಿಂಥ 1:9; 1 ಯೋಹಾನ 1:6, 7).

ಯೇಸುವಿನ ತ್ಯಾಗಮಯವಾದ ದೇಹ ಹಾಗೂ ರಕ್ತದಲ್ಲಿ ಯೇಸುವಿನ ಎಲ್ಲಾ ಮಹಾ ಸದ್ಗುಣಗಳು ಅಡಕವಾಗಿವೆ. ಕರ್ತನ ಭೋಜನದಲ್ಲಿ ಆತನ ಪ್ರೀತಿ, ಅನುಕಂಪ, ಚಿಂತನೆ ಹಾಗೂ ಪರಾಧೀನತೆಯನ್ನು ಧ್ಯಾನಿಸುತ್ತೇವೆ. "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ" (ಯೋಹಾನ 15:13).

ರೊಟ್ಟಿ ಮತ್ತು ದ್ರಾಕ್ಷಾ ರಸವು ಯೇಸು ಇಹಲೋಕದಲ್ಲಿ ಜೀವಿಸಿದ ದಿನಗಳನ್ನು ನೆನಪು ಮಾಡುತ್ತದೆ ಎಂದು ಆದಿ ಬರಹಗಾರರು ತಿಳಿಸಿರುವರು. ಅವುಗಳಿಂದ ಆತನ ಭೂಲೋಕದ ಸನ್ನಿಧಿ, ಯಜ್ಞ ಹಾಗೂ ವೇದನೆಗಳು ನೆನಪಾಯಿತು. ಅವುಗಳು ಗುರುತಗಳಾದವೇ ವಿನಃ ಆತನ ನಿಜವಾದ ರಕ್ತಮಾಂಸವಾಗಲಿಲ್ಲ ಎಂದು ಕಂಡುಕೊಂಡರು.

## ಅದರಿಂದ ಕ್ರೈಸ್ತ ಅನುಭವ ಹೊಂದುತ್ತೇವೆ

ಕರ್ತನ ಭೋಜನದಿಂದ, ಯೇಸುವನ್ನು ನೆನಪು ಮಾಡುವಾಗ, ಕ್ರೈಸ್ತರು ಆತನು ಕ್ರಿಸ್ತನೊಂದಿಗೆ ಒಂದು ಆತ್ಮೀಕ ಕ್ಷಣದ ಅನುಭವ ಹೊಂದುತ್ತಾರೆ. ಯೇಸುವಿನ ಸಂಸರ್ಗದಲ್ಲಿರುವಾಗ, ನಾವು ಆತನ ದೇಹವಾದ ಸಭೆಯೊಂದಿಗೆ ಅನ್ಯೋನ್ಯತೆಯನ್ನು

ಹೊಂದುತ್ತೇವೆ.

> ಕರ್ತನ ಭೋಜನವು ಕ್ರಿಸ್ತನ ಸನ್ನಿಧಿಯನ್ನು ಹಾಗೂ ಆತನ ಅನ್ಯೋನ್ಯತೆಯಲ್ಲಿ ಅನುಭವ ಹೊಂದಿದವರ ಸಂಗಡ ಬಾಂಧವ್ಯವನ್ನು ಉಂಟು ಮಾಡುತ್ತದೆ. ಕರ್ತನ ರೊಟ್ಟಿಯನ್ನು ಮುರಿಯುವ ಮೂಲಕ ಆನಂದವು ಉಂಟಾಗುತ್ತದೆ ...
>
> ... ಒಟ್ಟಾಗಿ ಸೇರಿ ಬಂದ ದೇವ ಜನರು ಕರ್ತನ ದೇಹವನ್ನು ತಿಂದು ಕ್ರೂಜಿತನಾದ ಯಜಮಾನನ ರಕ್ತವನ್ನು ಕುಡಿಯುವದರಿಂದ, ಜೀವಿತನಾಗಿ ಎದ್ದು ಬಂದ ಕ್ರಿಸ್ತನೊಂದಿಗೆ ದೇವ *ಸನ್ನಿಧಿಯನ್ನು* ಹೊಂದಿದ್ದೇವೆ ಎಂಬ ಮನಸ್ಸಾಕ್ಷಿಯು ಉಂಟಾದ್ದರಿಂದ, ಅವರು ಆನಂದಗೊಂಡರು ...[1]

ಜೊತೆಯವರೊಂದಿಗೆ ಕರ್ತನ ಭೋಜನವನ್ನು ಮಾಡುವಾಗ, ಪರಸ್ಪರ ಒಬ್ಬರನ್ನೊಬ್ಬರು ಕ್ರಿಸ್ತನೊಂದಿಗೆ ಸಂಸರ್ಗದಲ್ಲಿರುವವರು ಎಂಬ ಅರಿವಾಗುತ್ತದೆ. ಕರ್ತನ ಮೇಜಿನ ಮೇಲೆ ಇರುವ ಸಂಗತಿಗಳೊಂದಿಗೆ ಪಾಲುಗಾರರಾಗುವಾಗ, ಪರಸ್ಪರ ದೇವರನ್ನು ಆರಾಧಿಸುವವ ರಾಗಿರುತ್ತೇವೆ.

ಲವೋದಿಕಿಯ ಸಭೆಯ ಬಾಗಿಲಿನ ಬಳಿಯಲ್ಲಿ ನಿಂತು ತಟ್ಟುತ್ತಿರುವ ಯೇಸುವಿನ ಚಿತ್ರಣವು, ಆತನು ಅವರೊಂದಿಗಿನ ಊಟದೊಂದಿಗೆ ಅನ್ಯೋನ್ಯತೆಯನ್ನು ಬಯಸುವ ಯೋಚನೆಯನ್ನು ನೀಡುತ್ತದೆ. ಆದರೆ ಅವರು ಆತನನ್ನು ಬಾಗಿಲ ಹೊರಗೆ ನಿಲ್ಲಿಸಿರುವದು ಆಘಾತಕರ ಸಂಗತಿಯಾಗಿದೆ (ಪ್ರಕಟನೆ 3:14-20). ಆತನನ್ನು ನೆನಪುಮಾಡದೆ, ಆತನ ಮೇಜಿನಲ್ಲಿ ಪಾಲುಗಾರರಾದರೆ, ನಾವುಗಳು ಸಹ ಆತನನ್ನು ಬಾಗಿಲಿನಿಂದ ಹೊರಗೆ ನಿಲ್ಲಿಸಿರು ತ್ತೇವೆ. ಆತನು ನಮ್ಮೊಂದಿಗೆ ಅನ್ಯೋನ್ಯತೆಯನ್ನು ಬಯಸುತ್ತಾನೆ.

## ವಾಕ್ಯವು ನರಾವತಾರ ಎತ್ತಿತು ಎಂದು ನಾವುಗಳು ಪ್ರಚುರ ಪಡಿಸುತ್ತೇವೆ

ಕರ್ತನ ಭೋಜನದ ದೈಹೀಕ ವಸ್ತುಗಳು, ದೇವರು ತಾನೇ ರಕ್ತ ಮಾಂಸದಾರಿಯಾದನು ಎಂದು ತಿಳಿಸುತ್ತದೆ (ಮತ್ತಾಯ 1:23). ಆತನು ಭೂತ ವಾಗಿ ಮನುಷ್ಯನ ದೇಹದಲ್ಲಿ ಜೀವಿಸ ಲಿಲ್ಲ. ಆತನು ಕನ್ಯಾ ಮರಿಯಳಲ್ಲಿ ಹುಟ್ಟಿ, ಮನುಷ್ಯನಂತಾದನು (ಇಬ್ರಿಯ 2:14).

ಯೇಸು ಮನುಷ್ಯ ರೂಪದಲ್ಲಿ ಬಂದದ್ದರಿಂದ, ಆತನು ಮನುಷ್ಯರ ಅನುಭವಗಳನ್ನು ಅರಿತುಕೊಂಡನು (ಇಬ್ರಿಯ 4:15). ಆತನು ಊಟಮಾಡಿದನು, ಮಲಗಿದನು, ನಡೆದನು, ಪ್ರಾಣಿಯ ಮೇಲೆ ರಸ್ತೆಯ ಮೇಲೆ ಸವಾರಿ ಮಾಡಿದನು, ಮತ್ತು ಮೊಳೆಗಳಿಂದ ಶಿಲುಬೆಯ ಮೇಲೆ ತೂಗಲ್ಪಟ್ಟನು ಆತನ ದೇಹವು ತೊಳೆಯಲ್ಪಟ್ಟು ಸುಗಂಧ ದ್ರವ್ಯದಿಂದ ಅಭಿಷೇಕ ಹೊಂದಿದನು ಮತ್ತು ಹೂಣಲ್ಪಡುವದಕ್ಕಾಗಿ ಸಿದ್ಧಪಡಿಸಲ್ಪಟ್ಟನು ಪುನರುತ್ಥಾನದ ನಂತರವೂ, ಆತನು ದೈಹೀಕ ಸ್ಪರ್ಷವನ್ನು ಹೊಂದಿದ್ದನು.

ಭೂಮಿಯಲ್ಲಿರುವಾಗ ಯೇಸು ದೈಹೀಕವಾದ ದೇಹವನ್ನು ಹೊಂದಿದ್ದನು ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ.

- ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು (ಯೋಹಾನ 1:14).
- ಆತನು ಒಬ್ಬ ಕನ್ನಿಕೆಯಲ್ಲಿ ಜನಿಸಿದನು (ಮತ್ತಾಯ 1:18, 25).
- ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನು (ರೋಮಾಪುರ 1:3).
- ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗ ಬೇಕಾಗಿ ಬಂತು (ಫಿಲಿಪ್ಪಿ 2:7, 8; ಇಬ್ರಿಯ 2:17).

- ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು (ಇಬ್ರಿಯ 2:14).
- ಆದದರಿಂದ ಆತನು ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ ಎಂದು ಹೇಳಿದನು (ಲೂಕ 24:39, 40).
- ಆಗ ಯೇಸು ಅವರ ಎದುರಿಗೆ ಬಂದು - ನಿಮಗೆ ಶುಭವಾಗಲಿ ಅಂದನು. ಅವರು ಹತ್ತರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ಆತನಿಗೆ ನಮಸ್ಕಾರಮಾಡಿದರು (ಮತ್ತಾಯ 28:9; ಲೂಕ 24:39; ಯೋಹಾನ 20:17; 1 ಯೋಹಾನ 1:1) ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು (ಯೋಹಾನ 20:27).

ಯೇಸು ಪರಲೋಕದಿಂದ ಇಳಿದು ಬಂದವನಾಗಿ ಭೂಮಿಯಲ್ಲಿ ಮನುಷ್ಯರಲ್ಲಿ ವಾಸ ಮಾಡಿದನು (ಯೋಹಾನ 1:14). ಈ ವಿಚಾರವನ್ನು ಅಲ್ಲಗಳೆಯುವವನು ಕ್ರಿಸ್ತವಿರೋಧಿ ಯಾಗಿದ್ದಾನೆ (2 ಯೋಹಾನ 7), ಅಂದರೆ, ಅಂಥವರು ಕ್ರಿಸ್ತನ ಶತ್ರುಗಳೇ ಕರ್ತನ ಮೇಜಿ ನಲ್ಲಿರುವ ಆ ಗುರುತುಗಳು ಆತನು ದೇಹದಲ್ಲಿ ಇದ್ದನು ಎಂಬ ಸತ್ಯಾಂಶವಾಗಿದೆ.

"ಇದು ನನ್ನ ದೇಹ" (ಮತ್ತಾಯ 26:26) ಎಂಬ ಹೇಳಿಕೆಯು, ಆತನ ಪರಿಪೂರ್ಣವಾದ ದೇಹವು ಮಾನವರಿಗಾಗಿ ಯಜ್ಞವಾಯಿತು ಎಂದು ತೋರಿಸಿ ಕೊಡುತ್ತದೆ. "ಆತನು ತನ್ನ ದೇಹದ ಒಂದು ತುಣಕನ್ನು ಮಾತ್ರ ನೀಡದೆ, ತನ್ನ ಪರಿಪೂರ್ಣವಾದ ದೇಹವನ್ನು ಯಜ್ಞಮಾಡಿದನು."[2]

## ನಾವು ಹೊಸ ಒಡಂಬಡಿಕೆಗೆ ಅಧೀನರು ಎಂದು ತೋರಿಸುತ್ತದೆ

ಒಡಂಬಡಿಕೆ ಅಂದರೆ, ಒಂದು ಒಪ್ಪಂದವಾಗಿದೆ. ಹೊಸ ಒಡಂಬಡಿಕೆಯು ಹಳೆ ಯುದಕ್ಕಿಂತ ಉತ್ತಮವಾಗಿತ್ತು (ಇಬ್ರಿಯ 8:6) ಮತ್ತು ಹಳೆಯದು ನೀಡದೆ ಇರುವದನ್ನು ಹೊಸ ಒಡಂಬಡಿಕೆಯು ನೀಡಿರುತ್ತದೆ (ರೋಮಾಪುರ 8:3, 4; ಇಬ್ರಿಯ 10:1-4). ಹೊಸ ಒಡಂಬಡಿಕೆಯಲ್ಲಿನ ಯೇಸುವಿನ ರಕ್ತವು ಪಾಪಕ್ಷಮೆಯ ಸಾಧ್ಯತೆಯನ್ನು ನೀಡಿರುತ್ತದೆ (ಇಬ್ರಿಯ 9:22) ಹಾಗೂ ಪರಲೋಕದ ನಿತ್ಯತ್ವದ ಭರವಸೆಯನ್ನೂ ನೀಡಿರುತ್ತದೆ (1 ಪೇತ್ರ 1:3, 4).

ಮೊದಲನೆಯ ಒಡಂಬಡಿಕೆಯು ಪ್ರಾಣಿಗಳ ರಕ್ತವನ್ನು ಹೊಂದಿದ್ದು, ಮುಂದೆ ಬರುವದಕ್ಕಿದ್ದ ಯೇಸುವಿನ ರಕ್ತಕ್ಕೆ ಮುನ್ಸೂಚನೆಯಾಗಿತ್ತು (ವಿಮೋಚನಕಾಂಡ 24:5-8; ಇಬ್ರಿಯ 9:18-20) ಅದರಿಂದಲೇ ಹೊಸ ಒಡಂಬಡಿಕೆಯು ಪ್ರತಿಷ್ಟೆಗೊಂಡಿತು (ಮತ್ತಾಯ 26:28; ಮಾರ್ಕ 14:24; ಲೂಕ 22:20; 1 ಕೊರಿಂಥ 11:25). ಯೇಸುವಿನ ಒಂದೇ ಯಜ್ಞದ ಮೂಲಕ ಸರ್ವಕಾಲಕ್ಕೆ ಯೋಗ್ಯವಾದ ಯಜ್ಞವುಂಟಾಗಿ, ಪಾಪಗಳು ನೆನಪಿಗೆ ಬಾರದಂತೆ, ಕ್ಷಮಿಸಲ್ಪಟ್ಟವು (ಇಬ್ರಿಯ 10:12, 14, 17).

ದೇವರು ದಶಾಜ್ಞೆಗಳ ಸಮೇತವಾಗಿ ಹಳೇ ಒಡಂಡಿಕೆಯನ್ನು ಮಾಡಿದನು, ಇಸ್ರಾಯೇಲ್ಯರು ಐಗುಪ್ತವನ್ನು ತೊರೆದ ನಂತರ ದೇವರು ಇದನ್ನು ಮಾಡಿದನು (ವಿಮೋಚನ ಕಾಂಡ 34:27, 28; 1 ಅರಸು 8:9, 21). "ಅದನ್ನು ಆತನು ನಿಮಗೆ [ಇಸ್ರಾಯೇಲ್ಯರು; ಪ್ರಚುರ ಪಡಿಸಿದನು ಧರ್ಮೋಪದೇಶಕಾಂಡ 4:1] ನೀವು ಈ ದಶಾಜ್ಞೆಗಳನ್ನೊಳಗೊಂಡ, ಒಡಂಬಡಿಕೆಯನ್ನು ಪಾಲಿಸಬೇಕು. ದೇವರು ಅವುಗಳನ್ನು ಎರಡು ಕಲ್ಲಿನ ಹಲಗೆಗಳ ಮೇಲೆ ಬರೆದನು" (ಧರ್ಮೋಪದೇಶಕಾಂಡ 4:13). ಹಳೇ ಒಡಂಬಡಿಕೆಯನ್ನು, ಹೊಸ ಒಡಂಬಡಿಕೆಯು ತೆಗೆದುಹಾಕಿತು (ಇಬ್ರಿಯ 8:6-13; 10:9).

ಕ್ರೈಸ್ತರು ಎರಡನೆಯ ಒಡಂಬಡಿಕೆಗೆ ಒಳಗಾಗಿರುವರು, ಅವರು ಹಳೇ ಒಡಂಬಡಿಕೆಗೆ ಒಳಪಟ್ಟಿರುವದಿಲ್ಲ. ಹಳೆಯದನ್ನು ಬದಿಗಿಟ್ಟು, ಹೊಸದು ಪ್ರತಿಷ್ಟೆಗೊಂಡದೆ ಕರ್ತನ ಭೋಜನದಲ್ಲಿ ಪಾಲುಗಾರರಾಗುವಾಗ, ನಾವುಗಳು ಕ್ರಿಸ್ತನ ರಕ್ತದಿಂದ ಪ್ರತಿಷ್ಟೆಗೊಂಡ ಹೊಸ ಒಡಂಬಡಿಕೆಗೆ ಒಳಪಟ್ಟಿದ್ದೇವೆ ಎಂಬ ನೆನಪು ಉಂಟಾಗುತ್ತದೆ (ಮತ್ತಾಯ 26:28).

## ಅದರಲ್ಲಿ ನಾವು ಆತ್ಮೀಕ ಭಲವನ್ನು ಪಡೆಯುತ್ತೇವೆ

ಕೊರಿಂಥ ಸಭೆಯಲ್ಲಿದ್ದ ಕೆಲವರು ಆತ್ಮೀಕವಾದ ಬಲಹೀನತೆಯನ್ನು ಹೊಂದಿ ಕರ್ತನ ಭೋಜನದ ಕುರಿತು ತಪ್ಪಾಭಿಪ್ರಾಯ ಹೊಂದಿದ್ದರು. ಅವರು "ಕರ್ತನ ದೇಹ" ವೆಂದು ಪರಿಗಣಿಸಲಿಲ್ಲ (1 ಕೊರಿಂಥ 11:29, 30). ರೊಟ್ಟಿ ಮತ್ತು ದ್ರಾಕ್ಷಾರಸದ ಅರ್ಥವನ್ನು ತಿಳಿದವರು ಮಾತ್ರ ಅದರಿಂದ ಆಶೀರ್ವಾದ ಹೊಂದುವರು.

ದೈಹೀಕವಾದ ರೊಟ್ಟಿಯು, ದೈಹೀಕವಾದ ಭಲವನ್ನು ನೀಡುವಂತೆ ಕರ್ತನ ಭೋಜನ ದಿಂದ ಆತ್ಮೀಕವಾದ ಭಲವು ದೊರೆಯುತ್ತದೆ. ಆಹಾರದ ಮೂಲಕ ದೈಹೀಕವಾದ ಭಲ ಹಾಗೂ ಆರೋಗ್ಯ ದೊರಕುವಂತೆ ನಾವು ಯೇಸುವಿನಲ್ಲಿ ಧ್ಯಾನ ಮಾಡುವಾಗ ಆತ್ಮೀಕ ಭಲವನ್ನು ಹೊಂದುತ್ತೇವೆ.

ಯೇಸುವಿನ ರಕ್ತಕ್ಕೆ ಸೂಚನೆಯಾದ ದ್ರಾಕ್ಷಾರಸವು ಆತ್ಮೀಕ ಪುನರ್ಭಲವನ್ನು ನೀಡುವಂತೆ ನಾವು ಆತನ ರಕ್ತದಿಂದ ಹೊಸ ಬಲವನ್ನು ಪಡೆಯುತ್ತೇವೆ.

ಯೋಹಾನ 6:55, ಹೀಗೆ ಹೇಳುತ್ತಾನೆ, "ನನ್ನ ಮಾಂಸವೇ ನಿಜವಾದ ಆಹಾರ, ನನ್ನ ರಕ್ತವೇ ನಿಜವಾದ ಪಾನ" ಎಂಬ ಆತನ ಮಾತಿನಲ್ಲಿ ಕರ್ತನ ಭೋಜನದ ಅರ್ಥವಿರುವದಿಲ್ಲ. ಆದರೆ ಆತನ ದೇಹವೆಂಬ ರೊಟ್ಟಿ ಮತ್ತು ರಕ್ತವೆಂಬ ಪಾನದಿಂದ ಆತ್ಮೀಕ ಬಲ ಬರುತ್ತದೆ ಎಂಬ ಅರ್ಥದ ಕಲ್ಪನೆ ಇರುತ್ತದೆ. ರೊಟ್ಟಿ ಮತ್ತು ದ್ರಾಕ್ಷರಸ ಅವುಗಳು ತಮ್ಮ ಸಹಜವಾದ ಹೊಟ್ಟೆ ತುಂಬಿಸುವ ಕಾರ್ಯವನ್ನು ಮಾಡುತ್ತಿರುವದಿಲ್ಲ. ಅದರ ಬದಲಾಗಿ ಆತ್ಮೀಕ ಚೇತನ ವನ್ನು ನೀಡಿ, ಯೇಸುವಿನ ದೇಹ ಹಾಗೂ ರಕ್ತದ ನೆನಪನ್ನು ಉಂಟುಮಾಡುತ್ತದೆ.

## ಸಾರಾಂಶ

ಕರ್ತನ ಭೋಜನವು ಹೊಸ ಒಡಂಬಡಿಕೆಯ ತಿರುಳಾಗಿರುತ್ತದೆ. ಕೇಂದ್ರವ್ಯಕ್ತಿ ಯೇಸುವಾಗಿದ್ದು ನಮ್ಮ ಕರ್ತನಾದ ಯೇಸು ಕ್ರಿಸ್ತನು ನಮಗಾಗಿ ಸತ್ತು, ಪುನರುತ್ಥಾನದ ನಂತರ ಪರಲೋಕ ಸಿಂಹಾಸನ ಹೊಂದಿದನು ಎಂಬ ಅಂಶದ ಮೇಲೆ ನಮ್ಮ ಮನಸ್ಸನ್ನು ಕೇಂದ್ರಿಕರಿಸಲು ಅವಕಾಶ ಮಾಡಿರುತ್ತದೆ. ಕರ್ತನ ಭೋಜನದ ಮೂಲಕ ಆತ್ಮೀಕ ಜೀವನ, ಆತನ ಸಹವಾಸ, ಹಾಗೂ ನಿತ್ಯ ಜೀವವನ್ನು ಹೊಂದಿದ್ದೇವೆ ಎಂದು ಹೊಸ ಒಡಂಬಡಿಕೆಯ ವಾಗ್ದಾನಗಳು ತಿಳಿಸುತ್ತವೆ (ನೋಡಿರಿ ಇಬ್ರಿಯ 8:6; 1 ಪೇತ್ರ 1:3, 4).

---

ಟಿಪ್ಪಣಿಗಳು

[1]Oscar Cullmann, "The Breaking of Bread and the Resurrection Appearances," in Oscar Cullmann and F. J. Leenhardt, *Essays on the Lord's Supper,* trans. and ed. J. G. Davies (Cambridge: Lutterworth Press, 1958; reprint, Atlanta, Ga.: John Knox Press, 1975), 16. [2]Scott McCormick, Jr., *The Lord's Supper: A Biblical Interpretation* (Philadelphia:Westminster Press, 1966), 16.

## ಕರ್ತನ ಭೋಜನದ ಭಾಷೆ

ಕರ್ತನ ಭೋಜನದ ಕುರಿತು ಹೊಸ ಒಡಂಬಡಿಕೆಯು ವಿವಿಧ ಹೇಳಿಕೆಗಳನ್ನು ತಿಳಿಸುತ್ತದೆ. ಪ್ರತಿವಾರದ ಮೊದಲನೆಯ ದಿನದ ಈವಿಚಾರದ ಪ್ರಾಮುಖ್ಯತೆಯ ಪಕ್ಷಿ ನೋಟ ವನ್ನು ನೋಡೋಣ.

*"ನಾವು ರೊಟ್ಟಿಯನ್ನು ಮುರಿದು ತಿನ್ನುವದು"* (1 ಕೊರಿಂಥ 10:16). ಮುರಿ *"ಕ್ಲಾಂ"* ಎಂಬ ಕ್ರಿಯಾಪದ ಅಥವ "*klasis*" ಎಂಬ (ಮುರಿಯುವ) ಕ್ರಿಯಾಪದವು "ಕರ್ತನ ಭೋಜನದ" ಸೂಚನೆಯಾಗಿದೆ (ಅಪೊಸ್ತಲರ ಕೃತ್ಯಗಳು 2:42; 20:7; 1 ಕೊರಿಂಥ 10:16). ಸಾಧಾರಣವಾದ ಭೋಜನದಲ್ಲಿ ರೊಟ್ಟಿ[1] "ಮುರಿಯುವ" ಪ್ರಕ್ರಿಯೆಯಾಗಿದೆ (ಅಪೊಸ್ತಲರ ಕೃತ್ಯಗಳು 2:46). "ಕರ್ತನ ಭೋಜನದ" ಕುರಿತ ಬರವಣಿಗೆಯಾಗಿ ಈ ವ್ಯಾಖ್ಯಾನವನ್ನು ಆದಿ ಕ್ರೈಸ್ತರು ನೀಡಿದ್ದರು.

*"ಪಾಲುಗಾರರು"* (KJV). "*Koinonia*" ಎಂದರೆ (1 ಕೊರಿಂಥ 10:16). "ಪಾಲುದಾರರು" (NASB) ಆತ್ಮೀಕ "ಪಾಲುಗಾರಿಕೆ" (NIV) ಅಥವಾ ಯೇಸುವಿನ ದೇಹ ಹಾಗೂ ರಕ್ತದಲ್ಲಿ ಪಾಲುದಾರರು.

*"ಕರ್ತನ ಪಂಕ್ತಿ"* (1 ಕೊರಿಂಥ 10:21). "ಕರ್ತನ" (*kuriou*) *"ಮೇಜು"* ಎಂಬ ಇನ್ನೊಂದು ಪದ. ಕರ್ತನ ಯೋಜನೆಗನುಗುಣವಾದ ಸಂಕೇತಗಳು[2] ಎಂಬ ಅರ್ಥ.

*"ಕರ್ತನ ಭೋಜನ"* (1 ಕೊರಿಂಥ 11:20). ಇದು ಕರ್ತನಿಗೆ ಸಂಬಂಧ ಪಟ್ಟ ಭೋಜನವಲ್ಲ. *Kuriakon,* ನಾಮಪದವಾಗಿರದೆ, ಕರ್ತನ ವಿಶೇಷತೆ ಎಂಬ ಅರ್ಥ "ಕರ್ತನ ದಿನ" ದಂತೆಯೇ ಕರ್ತನ ಭೋಜನದ ಮೂಲಕ ಕರ್ತನನ್ನು ಸನ್ಮಾನಿಸುತ್ತೇವೆ (ಪ್ರಕಟನೆ 1:10).

ಕೆಲವರು ಕರ್ತನ ಭೋಜನವನ್ನು "ಸಂಸ್ಕಾರ" ಎಂದು ತಪ್ಪಾರ್ಥ ಮಾಡಿಕೊಂಡಿದ್ದಾರೆ ಆ ಗುರುತುಗಳಿಂದ ಆಶೀರ್ವಾದ ದೊರಕುತ್ತದೆ ಎಂದು ನಂಬುತ್ತಾರೆ. ಕರ್ತನ ರಕ್ತದಿಂದ ಮಾತ್ರ ಪಾಪಶುದ್ಧಿಯಾಗುತ್ತದಷ್ಟೆ (ಪ್ರಕಟನೆ 1:5). ದೀಕ್ಷಾಸ್ನಾನದ ಮೂಲಕ ಆತ್ಮೀಕ ಅನುಭವ ವಾಗುತ್ತದೆ (ರೋಮಾಪುರ 6:4-8, 17, 18). ಕ್ರಿಸ್ತನಿಗೆ ವಿಧೇಯತೆಯಿಂದ ಮಾಡುವ ಕಾರ್ಯವೇ ಹೊರತು, ಯಾವುದೇ ವಿಶೇಷವಾದ ಕೃಪಾಶೀರ್ವಾದ ಉಂಟಾಗುವದಿಲ್ಲ.

"Eucharist" "ಯೂಕರಿಸ್ಟ್" "ಕೃತಜ್ಞತೆ" ಎಂಬ ಗ್ರೀಕ್ ಪದ, ಕರ್ತನ ಭೋಜನಕ್ಕೆ ತಪ್ಪಾಗಿ ಬಳಸಲ್ಪಟ್ಟ [*eucharistic*] ಪದವಾಗಿದೆ.[3]

---

ಟಿಪ್ಪಣಿಗಳು

[1]ನೋಡಿರಿ ಮತ್ತಾಯ 14:19; 15:36; 26:26; ಮಾರ್ಕ 8:6, 19; 14:22; ಲೂಕ 22:19; 24:30; ಅಪೊಸ್ತಲರ ಕೃತ್ಯಗಳು 20:11; 27:35; 1 ಕೊರಿಂಥ 10:16; 11:24. [2]ರೊಟ್ಟಿ ಮತ್ತು ದ್ರಾಕ್ಷಾರಸವು ಕ್ರಿಸ್ತನ ಶರೀರಕ್ಕೆ ಮತ್ತು ರಕ್ತಕ್ಕೆ ಗುರುತಾಗಿದೆ. [3]Charles Hebert, *The Lord's Supper: Uninspired Teaching,* vol. 1 (London: Seeley, Jackson and Halliday, 1879), 28.